ಒಟ್ಟು ಪ್ರಶ್ನೆಗಳ ಸಂಖ್ಯೆ : 34 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4
Total No. of Questions : 34 ] [ Total No. of Printed Pages : 4

**ಸಂಕೇತ ಸಂಖ್ಯೆ : 08-K (OS)**
**Code No. : 08-K (OS)**

## ಶಿಕ್ಷಣ – IV
## EDUCATION – IV
# ವಿಷಯಾಧಾರಿತ ಬೋಧನಾ ಪದ್ಧತಿ
# ಪ್ರಥಮ ಭಾಷೆ — ಕನ್ನಡ
# CONTENT BASED METHODOLOGY OF TEACHING FIRST LANGUAGE — KANNADA

**(ಹಳೆ ಪಠ್ಯವಸ್ತು)**
**( Old Syllabus )**

ದಿನಾಂಕ : 01. 07. 2015 ]
Date : 01. 07. 2015 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಪರಮಾವಧಿ ಅಂಕಗಳು : 100
Time : 10.00 A.M. to 1.00 P.M. ] [ Max. Marks : 100

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

## ಭಾಗ – A

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು 3 ಪುಟಗಳಿಗೆ ಮೀರದಿರಲಿ. ಪ್ರತಿಯೊಂದು ಪ್ರಶ್ನೆಯ (a) ಮತ್ತು (b) ಉಪ–ಪ್ರಶೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು. ಪ್ರತಿ ಪ್ರಶ್ನೆಗೆ **ಹತ್ತು** ಅಂಕಗಳು : 4 × 10 = 40

1. a) ಮಗುವಿಗೆ ಭಾಷೆ ಮತ್ತು ಸಾಹಿತ್ಯವನ್ನು ಪರಿಚಯಿಸುವಾಗ ಶಿಕ್ಷಕ ವಿವಿಧ ವಿಧಾನಗಳ ಮೇಲಿನ ಪ್ರಭುತ್ವವನ್ನು ತರಗತಿ ಬೋಧನೆಯಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ? ಚರ್ಚಿಸಿ.

   b) ಭಾಷಾ ಶಿಕ್ಷಕನಿಗಿರಬೇಕಾದ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಗಳಾವುವು ? 6 + 4

2. a) ಭಾಷಾ ಸಂವಹನ ಕೌಶಲಗಳನ್ನು ಪ್ರಾಥಮಿಕ ಶಾಲಾ ಹಂತದಲ್ಲಿ ಹೇಗೆ ಬೆಳೆಸುವಿರಿ ? ವಿವರಿಸಿ.

   b) ಓದುಗಾರಿಕೆಯಿಂದಾಗುವ ಪ್ರಯೋಜನಗಳಾವುವು ? ಅವುಗಳಲ್ಲಿ ಯಾವುದಾದರೂ ಎರಡನ್ನು ಸಂಕ್ಷಿಪ್ತವಾಗಿ ತಿಳಿಸಿ. 5 + 5

3. a) ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಶಬ್ದ ಸಂಪತ್ತನ್ನು ಹೆಚ್ಚಿಸುವಲ್ಲಿ ನೀವು ಕೈಗೊಳ್ಳಬಹುದಾದ ಕಾರ್ಯಚಟುವಟಿಕೆಗಳನ್ನು ಚರ್ಚಿಸಿ.

b) 'ಬರವಣಿಗೆಯನ್ನು ಕಲಿಸುವ ಮುನ್ನ ಚಿತ್ರಗಳನ್ನು ಬರೆಯುವುದನ್ನು ಕಲಿಸಿ' – ಗಾಂಧೀಜಿಯವರ ಈ ಹೇಳಿಕೆಯನ್ನು ಸಮರ್ಥಿಸಿ. 5 + 5

4. a) ಘಟಕ ಯೋಜನೆಯ ರೂಪುರೇಷೆಗಳನ್ನೊಳಗೊಂಡಂತೆ ನೀವು ನೀಡಿರುವ ಒಂದು ಪಾಠಕ್ಕೆ 'ಘಟಕ ಯೋಜನೆ'ಯೊಂದನ್ನು ಸಿದ್ಧಪಡಿಸಿ.

b) ಅಣುಬೋಧನಾ ಕೌಶಲಗಳು ಯಾವುವು ? ಅವುಗಳಲ್ಲಿ ಯಾವುದಾದರೂ ಒಂದಕ್ಕೆ ಬೋಧನಾ ಕೌಶಲದ ಘಟಕಾಂಶಗಳನ್ನು ಬರೆಯಿರಿ. 6 + 4

5. a) ನಾಟಕೀಕರಣ ಬೋಧನೆಯಲ್ಲಿ 'ನಾಟಕ' ಬೋಧನೆಯ ಹಂತಗಳ ಮಹತ್ತ್ವವನ್ನು ಉದಾಹರಣೆ ಸಹಿತ ಚರ್ಚಿಸಿ.

b) ಅಖಂಡ ಪದ್ಧತಿಗೂ – ಖಂಡ ಪದ್ಧತಿಗೂ ಇರುವ ವ್ಯತ್ಯಾಸಗಳನ್ನು ಉದಾಹರಣೆಗಳೊಂದಿಗೆ ಚರ್ಚಿಸಿ. 5 + 5

6. a) ತರಗತಿ ಬೋಧನೆಯಲ್ಲಿ ರೇಡಿಯೋ ಹಾಗೂ ಧ್ವನಿ ಸುರುಳಿಗಳ ಮಹತ್ತ್ವವೇನು ? ಅವುಗಳನ್ನು ಬೋಧನಾ ಸಂಪನ್ಮೂಲವಾಗಿ ಹೇಗೆ ಬಳಸಿಕೊಳ್ಳುವಿರಿ ? ಸ್ಪಷ್ಟಪಡಿಸಿ.

b) ಭಾಷಾ ಕಲಿಕೆಯಲ್ಲಿ ದೂರದರ್ಶನದ ಪಾತ್ರವನ್ನು ಚರ್ಚಿಸಿ. 6 + 4

7. a) ಕನ್ನಡ ಭಾಷಾ ವಿಷಯದಲ್ಲಿ ಮಾದರಿ ಪ್ರಶ್ನೆಪತ್ರಿಕೆಯನ್ನು ತಯಾರಿಸುವಾಗ ಗಮನದಲ್ಲಿಡಬೇಕಾದ ಮುಖ್ಯ ಅಂಶಗಳನ್ನು ಪಟ್ಟಿ ಮಾಡಿ.

b) ವಸ್ತುನಿಷ್ಠ ಮಾದರಿ ಪ್ರಶ್ನೆ ಎಂದರೇನು ? ವಸ್ತು ನಿಷ್ಠ ಮಾದರಿ ಪ್ರಶ್ನೆಗಳನ್ನು ತಯಾರಿಸುವಾಗ ಶಿಕ್ಷಕರು ಹೆಚ್ಚಿನ ಪ್ರಾವೀಣ್ಯತೆಯನ್ನು ಹೊಂದಿರಬೇಕು ಏಕೆ ? ಸ್ಪಷ್ಟಪಡಿಸಿ. 5 + 5

## ಭಾಗ – B

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಏಳು*** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ***ಐದು*** ಅಂಕಗಳು : $7 \times 5 = 35$

8. ಭಾಷಾ ಬೋಧಕರಲ್ಲಿ ನಿರೀಕ್ಷಿಸುವ ಗುಣಗಳನ್ನು ಕುರಿತು ಚರ್ಚಿಸಿ.

9. ಉತ್ತಮ ಮಾತುಗಾರಿಕೆಯ ಪ್ರಮುಖ ಲಕ್ಷಣಗಳು ಯಾವುವು ?

10. ಭಾಷಾ ಕಲಿಕೆಯಲ್ಲಿ ಪ್ರಚೋದಕ ಹಾಗೂ ಆಸಕ್ತಿಯುತ ಕಲಿಕೆಯ ಮಹತ್ತ್ವವನ್ನು ತಿಳಿಸಿ.

11. ಪ್ರಾಥಮಿಕ ಶಾಲಾ ಮಕ್ಕಳಿಗೆ 'ಪತ್ರ ಲೇಖನ' ಪಾಠಕ್ಕೆ ಗೃಹಪಾಠವನ್ನು ಹೇಗೆ ನೀಡಬೇಕೆಂದು ಉದಾಹರಣೆ ಮೂಲಕ ತಿಳಿಸಿ.

12. ಪ್ರಾಥಮಿಕ ಹಂತದಲ್ಲಿ ಪದ್ಯಬೋಧನೆ ಮಾಡುವಾಗ ಬಳಸುವ ಹಂತಗಳಾವುವು ? ಅವುಗಳಲ್ಲಿ ಯಾವುದಾದರೂ ಒಂದನ್ನು ಉದಾಹರಣೆ ಮೂಲಕ ತಿಳಿಸಿ.

13. ಕಂಠಪಾಠ ಎಂದರೇನು ? ಕಂಠಪಾಠದಿಂದಾಗುವ ಪ್ರಯೋಜನಗಳನ್ನು ವಿಶ್ಲೇಷಿಸಿ.

14. ಸಂಪೂರ್ಣ ಪದ್ಧತಿ ಎಂದರೇನು ? ಇದರಲ್ಲಿರುವ ಐದು ಹಂತಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.

15. ಭಾಷಾ ಪಠ್ಯಪುಸ್ತಕ ರಚನಾ ತತ್ತ್ವಗಳಲ್ಲಿ ಯಾವುದಾದರೂ ಐದು ತತ್ತ್ವಗಳನ್ನು ವಿವರಿಸಿ.

16. ಕನ್ನಡ ಭಾಷಾ ಪುಸ್ತಕವು ಒಳಗೊಂಡಿರಬೇಕಾದ ಪ್ರಮುಖ ಗುಣಲಕ್ಷಣಗಳನ್ನು ಪಟ್ಟಿ ಮಾಡಿ.

17. ಮಕ್ಕಳಲ್ಲಿ ಭಾಷಾ ಕೌಶಲಗಳನ್ನು ಬೆಳೆಸಲು ಭಾಷಾ ಪ್ರಯೋಗ ಶಾಲೆ ಹೇಗೆ ಸಹಕಾರಿಯಾಗಿದೆ ? ತಿಳಿಸಿ.

## ಭಾಗ – C

III. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು ½ ಪುಟಕ್ಕೆ ಮೀರದಿರಲಿ. ಪ್ರತಿ ಪ್ರಶ್ನೆಗೆ ***ಮೂರು*** ಅಂಕಗಳು : $5 \times 3 = 15$

18. ಮಕ್ಕಳಲ್ಲಿ ಸಾಹಿತ್ಯ ಅಭಿರುಚಿಯನ್ನು ಬೆಳೆಸುವುದು ಹೇಗೆ ?

19. ಗಟ್ಟಿ ಓದು ಎಂದರೇನು ? ಗಟ್ಟಿ ಓದಿಗೆ ನೀಡುವ ಯಾವುದಾದರೂ ಎರಡು ಸಲಹೆಗಳನ್ನು ಕುರಿತು ಚರ್ಚಿಸಿ.

20. ಪಾಠಯೋಜನೆ ಶಿಕ್ಷಕರಿಗೆ ಅತೀ ಅವಶ್ಯಕ ಏಕೆ ?

21. ದಿನಚರಿಯು ಮಗುವಿನ ದೈನಂದಿನ ಜೀವನದಲ್ಲಿ ಶಾಶ್ವತವಾದ ದಾಖಲೆಯೂ ಹೌದು ಹೇಗ ? ತಿಳಿಸಿ.

22. 'ಪಠ್ಯಪುಸ್ತಕವು ಬೋಧನೆಗೆ ಪ್ರಮುಖ ಸಾಧನವಾಗಿದೆ' ಹೇಗೆ ? ಚರ್ಚಿಸಿ.

23. ಸಾಹಿತ್ಯದ ಪ್ರಕಾರಗಳಾವುವು ? ಅದರಲ್ಲಿ ಯಾವುದಾದರೂ ಒಂದು ಪ್ರಕಾರದ ಮಹತ್ತ್ವವನ್ನು ತಿಳಿಸಿ.

24. ಭಾಷಾ ಬೋಧಕನಿಗೆ ಕಪ್ಪುಹಲಗೆ ಬಹಳ ಮುಖ್ಯ ಏಕೆ ? ತಿಳಿಸಿ.

## ಭಾಗ – D

IV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿ ಉತ್ತರವು ಒಂದೆರಡು ವಾಕ್ಯಗಳಿಗೆ ಮೀರದಿರಲಿ. ಪ್ರತಿ ಪ್ರಶ್ನೆಗೆ ***ಒಂದು*** ಅಂಕ : $10 \times 1 = 10$

25. 'ಚುಟಕಗಳ ಬ್ರಹ್ಮ' ಯಾರು ?

26. ದ.ರಾ. ಬೇಂದ್ರೆ ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ ?

27. ಭಾಷಾ ಬೋಧನೆಯ ಮುಖ್ಯ ಗುರಿ ಯಾವುದು ?

28. ನಾಲ್ಕನೇ ತರಗತಿ ಮಕ್ಕಳಲ್ಲಿ ಸಾಮಾನ್ಯವಾಗಿ ಎಷ್ಟು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯವಿರುತ್ತದೆ ?

29. ನೋಡಿ ಹೇಳುವ ಪದ್ಧತಿಗೂ ವಾಕ್ಯಪದ್ಧತಿಗೂ ಇರುವ ಯಾವುದಾದರೂ ಒಂದು ವ್ಯತ್ಯಾಸವನ್ನು ತಿಳಿಸಿ.

30. 'ಅತ್ಯಂತ' – ಈ ಪದವನ್ನು ಬಿಡಿಸಿ, ಸಂಧಿಯನ್ನು ಹೆಸರಿಸಿ.

31. ಇ.ಎಲ್. ಥಾರ್ನ್‌ಡೈಕ್ ಅವರು ಪ್ರತಿಪಾದಿಸಿರುವ ಭಾಷಾ ಕಲಿಕೆಯ ನಿಯಮ ಯಾವುದು ?

32. ಭಾಷಾ ಬೋಧನೆಯಲ್ಲಿ ಮಾಡಬಹುದಾದ ಅನೌಪಚಾರಿಕ ಮೌಲ್ಯಮಾಪನದ ಯಾವುದಾದರೂ ಒಂದು ಸಾಧನವನ್ನು ತಿಳಿಸಿ.

33. 'ಗುಣಿತಾಕ್ಷರ' ಎಂದರೇನು ?

34. 'ಮಗುವಿನ ಮುಖ ಚಂದ್ರನಂತೆ ದುಂಡಾಗಿದೆ' – ಇಲ್ಲಿ ನೀಡಿರುವ ಅಲಂಕಾರ ಯಾವುದು ?